
ನಾಂದಿ

# ಇಬ್ಬರು ಕವಿಗಳ ನಿರ್ಗಮನ

**ಕ**ನ್ನಡದ ಇಬ್ಬರು ಕವಿಗಳು – ಕೆ.ಬಿ. ಸಿದ್ಧಯ್ಯ, ಜಿ.ಕೆ. ರವೀಂದ್ರಕುಮಾರ್ ನಿರ್ಗಮಿಸಿದ್ದಾರೆ. ಬದುಕಿನ ತಾತ್ವಿಕತೆಯ ಹುಡುಕಾಟದ ಈ ಕವಿಗಳು ಕನ್ನಡ ಕಾವ್ಯಕ್ಕೆ ತಮ್ಮದೇ ಆದ ನುಡಿಗಟ್ಟನ್ನು ಕೊಟ್ಟವರು. ಕಾವ್ಯದ ಭಿನ್ನ ದಾರಿಯಲ್ಲಿ ನಡೆದವರು. ಇಬ್ಬರ ಕಾವ್ಯದ ರೀತಿ ಪರಸ್ಪರ ವಿರುದ್ಧವೆನ್ನಬಹುದಾದ ದಿಕ್ಕಿನಲ್ಲಿತ್ತು. ಈ ಅಂಶ ಕನ್ನಡ ಸಾಹಿತ್ಯದ ಜೀವಂತಿಕೆಯನ್ನು ತೋರುವುದರ ಜೊತೆಗೆ ಅದರ ವಿಶಿಷ್ಟತೆಯನ್ನೂ ಓದುಗರಿಗೆ ಮನಗಾಣಿಸುವಂತಿದೆ. ಕವಿಯೊಬ್ಬ ಕಣ್ಮರೆಯಾದರೆ ಒಂದು ಭಾಷೆ, ನುಡಿಗಟ್ಟನ್ನು ನಾಡು ಕಳೆದುಕೊಂಡಂತೆ.

ನಾಲ್ಕು ಕವನ ಸಂಕಲನ ಪ್ರಕಟಿಸಿದ್ದ ಸಿದ್ಧಯ್ಯ, ಐದು ಕವಿತಾಸಂಗ್ರಹ ಪ್ರಕಟಿಸಿದ್ದ ರವೀಂದ್ರಕುಮಾರ್ ಅವರ ಕಾವ್ಯದ ಬಗ್ಗೆ ಚರ್ಚೆ, ಸಂವಾದ, ವಿಮರ್ಶೆ ಸಾಕಷ್ಟು ನಡೆಯಲಿಲ್ಲ. ಅದು ಈ ಕವಿಗಳ ಕಾವ್ಯದ ಸಮಸ್ಯೆ ಅಲ್ಲ. ಒಟ್ಟಾರೆ ಕನ್ನಡ ಸಂವೇದನೆಯಲ್ಲೇ ಇರುವ ಕೊರತೆ ಅದು. ಕನ್ನಡ ಓದುಗರಿಗೆ ಕಾವ್ಯದ ಗಹನತೆ ಮತ್ತು ಅದರ ನಿಗೂಢ ಚೆಂದದ ಬಗ್ಗೆ ತುಸು ನಿರುತ್ಸಾಹ, ನಿರ್ಲಕ್ಷ್ಯ ಇದೆ. ಮೊದಲಿನಿಂದಲೂ ಕನ್ನಡ ವಿಮರ್ಶೆ ಪ್ರಧಾನ ಧಾರೆಯ, ಜನರ ನಡುವೆ ಚಲಾವಣೆಯಲ್ಲಿರುವ ಕಾವ್ಯವನ್ನು ಹೆಚ್ಚು ಚರ್ಚಿಸುತ್ತ, ಅದರೊಂದಿಗೆ ಸಂವಾದಿಸುತ್ತ, ಒಡನಾಡುತ್ತ ಬಂದಿದೆ. ಬಹುಶಃ ಅದಕ್ಕೂ ಅದರೊಂದಿಗೆ ಗುರುತಿಸಿಕೊಳ್ಳುವ ತುರ್ತು, ಅನಿವಾರ್ಯತೆ ಇರುತ್ತದೆ ಎಂದು ಕಾಣುತ್ತದೆ. ಬಹುಜನ ಗಮನಕ್ಕೆ ಬಂದ ಕಾವ್ಯ ಮಾತ್ರ ಅದರ ತುತ್ತಾಗುತ್ತದೆ, ಅದರ ತೆಕ್ಕೆಗೆ ಬೀಳುತ್ತದೆ. ವಿಮರ್ಶೆ ಈ ಭಿನ್ನಧಾರೆಯ ಎರಡನೇ ಸಾಲಿನ ಬರಹಗಾರರತ್ತ ಒಮ್ಮೊಮ್ಮೆ ಕಣ್ಣೆತ್ತಿಯೂ ನೋಡುವುದಿಲ್ಲ.



ಕೆ.ಬಿ. ಸಿದ್ಧಯ್ಯ



ಜಿ.ಕೆ. ರವೀಂದ್ರಕುಮಾರ್

ಇದು ಕೆಲವೊಮ್ಮೆ ಪ್ರಮುಖ ಕವಿಗಳ ವಿಷಯದಲ್ಲೂ ಆಗುತ್ತದೆ. ಅವರ ಯಶಸ್ವಿ ಕವಿತೆಗಳ ಹೊರತಾಗಿ ಬೇರೆ ಪ್ರಯತ್ನಗಳ ಕಡೆಗೆ ವಿಮರ್ಶೆಯ, ಓದುಗರ ಗಮನ ಹೋಗುವುದು ಕಡಿಮೆ. ಯಶಸ್ಸು ಮತ್ತು ಜನಪ್ರಿಯತೆಗೆ ತೆರುವ ಬೆಲೆ ಇದು ಎನ್ನಬಹುದು. ಇವೆಲ್ಲವೂ ಕಾವ್ಯಕ್ಕೆ ಮಾತ್ರ ಸೀಮಿತವಾದದ್ದು ಎನ್ನುವಂತಿಲ್ಲ. ಅದು ಕತೆ, ಕಾದಂಬರಿ, ಪ್ರಬಂಧಗಳ ವಿಷಯದಲ್ಲೂ ಆಗುತ್ತದೆ. ಮುಖ್ಯವಲ್ಲದ ಬರಹಗಳು, ಲೇಖಕರು ಮುನ್ನೆಲೆಗೆ ಬರುವುದುಂಟು. ಅನಗತ್ಯ ಪ್ರಾಮುಖ್ಯತೆಯನ್ನು ಪಡೆಯುವುದುಂಟು. ಆದರೆ, ಕಾಲ ಎಲ್ಲವನ್ನೂ ಒಂದು ದಿನ ಹಿಂದಕ್ಕೆ ತಳ್ಳುತ್ತದೆ. ಆಗ ಗಟ್ಟಿ ಅಲ್ಲದ ಬರಹಗಳು ಪ್ರಪಾತಕ್ಕೆ ಬಿದ್ದಿರುತ್ತವೆ.

ಈ ಸಂಚಿಕೆಯಲ್ಲಿ ಈ ಇಬ್ಬರು ಕವಿಗಳ ಕುರಿತಾದ ಲೇಖನಗಳಿವೆ. ಸಾಹಿತ್ಯದ ನೊಬೆಲ್ ಮತ್ತು ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕರ ಸಾಹಿತ್ಯ ಕುರಿತ ಬರಹಗಳನ್ನು ವಿಮರ್ಶಕ ನರೇಂದ್ರ ಪೈ ಬರೆದಿದ್ದಾರೆ. ಜನಪದ ಗಾಯಕಿ ಕಾಳಮ್ಮ ಚೆಲುವಾದಿ ಸಂದರ್ಶನ ಈ ಬಾರಿಯ ವಿಶೇಷ.

**ಸಂದೀಪ ನಾಯಕ**